ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.cor

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521
(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ಸಂಖ್ಯೆ: ಕವಿಪ್ರನಿನಿ/ಬಿ16/3579/98-99 ದಿನಾಂಕ: 5 MAR 2021

## ತಿದ್ದುಪಡಿ

**ವಿಷಯ:** ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ನಿಯತಗೊಳಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಆಇ 7(ಇ) ಸೇನಿಸೇ 2020, ದಿನಾಂಕ: 28.01.2021.
2. ನಿಗಮದ ಆದೇಶ ಸಂಖ್ಯೆ: ಕಪಿಪ್ರನಿನಿ/ಬಿ16/3579/98-99 ದಿನಾಂಕ: 26.02.2021.

***

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3579/98-99 ದಿನಾಂಕ: 26.02.2021 ರಲ್ಲಿ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು 'ತಕ್ಷಣದಿಂದ ಜಾರಿಗೆ ಬರುವಂತೆ' ಎಂದು ತಿಳಿಸಿರುವುದನ್ನು, 'ಸರ್ಕಾರದ ಆದೇಶ ದಿನಾಂಕ: 28.01.2021 ರಿಂದ ಜಾರಿಗೆ ಬರುವಂತೆ' ಎಂದು ಓದಿಕೊಳ್ಳುವುದು.

"ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿದೆ."

ಪ್ರಧಾನ ವ್ಯವಸ್ಥಾಪಕರು
(ಸಿಬ್ಬಂದಿ)

## ಮೆಮೋ

ಕ್ರಮಾಂಕ:ಪ್ರವ್ಯ(ಆ ಮತ್ತು ಮಾ.ಸಂ)/ಉಪ್ರವ್ಯ/ಸಪ್ರವ್ಯ/ವ್ಯ/ಹಿಸ-2/20-21/ CYS-1736 ದಿನಾಂಕ: 09 MAR 2021

ಅಧಿಕಾರಿ/ನೌಕರರಿಗೆ ಗಳಿಕೆ ರಜೆಯನ್ನು ಆಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕವಿಪ್ರನಿನಿ, ಬೆಂಗಳೂರುರವರು ಹೊರಡಿಸಿರುವ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ16/3579/98-99 ದಿನಾಂಕ:26.02.2021 ಮತ್ತು ಕವಿಪ್ರನಿನಿ/ಬಿ16/3579/98-99 ದಿನಾಂಕ: 05.03.2021ರ ಆದೇಶಗಳನ್ನು ಚಾವಿಸನಿನಿಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿದೆ.

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಚಾ.ವಿ.ಸ.ನಿ.ನಿ., ಮೈಸೂರು.

**ಪ್ರತಿಗಳು:**

- ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿನಿ, ಮೈಸೂರುರವರ ಅವಗಾಹನೆಗಾಗಿ.
- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ), ನಿಗಮ ಕಛೇರಿ, ಮೈಸೂರು.
- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
- ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ.
- ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ ರವರ ಮಾಹಿತಿಗಾಗಿ ಹಾಗು ಅಗತ್ಯ ಕ್ರಮಕ್ಕಾಗಿ.
- ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್), ನಿಗಮ ಕಛೇರಿ, ಮೈಸೂರುರವರಿಗೆ ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
- ಆ.ಕಾ-ವ್ಯ.ನಿ/ನಿ(ತಾಂ)/ಮು.ಆ.ಅ
- ಸ-2(ಆ ಮತ್ತು ಮಾ.ಸಂ)/ಪ್ರ.ಕ.

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521
(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ವಿಷಯ: ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣ ಪಡೆಯುವ ಸೌಲಭ್ಯವನ್ನು ನಿಯತಗೊಳಿಸುವ ಬಗ್ಗೆ.

ಉಲ್ಲೇಖ:
1. ಕವಿಮಂ ಅಕೌಂಟ್ಸ್ ಮ್ಯಾನ್ಯುಯಲ್ ವಾಲ್ಯೂಂ-2, ಭಾಗ-ಬಿ ಪ್ಯಾರಾ 504 ಹಾಗೂ ಪ್ಯಾರಾ 504(ಎ).
2. ನಿಗಮದ ಆದೇಶ ಸಂಖ್ಯೆ: ಕವಿಮಂ/ಬಿ16/3579/98-99, ದಿನಾಂಕ: 23.07.2012.
3. ಸರ್ಕಾರದ ಆದೇಶ ಸಂಖ್ಯೆ: ಆಇ2(ಇ) ಸೇನಿಸೇ 2020, ದಿನಾಂಕ: 05.05.2020.
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3579/98-99 ದಿನಾಂಕ: 06.05.2020.
5. ಸರ್ಕಾರದ ಆದೇಶ ಸಂಖ್ಯೆ: ಆಇ7(ಇ) ಸೇನಿಸೇ 2020, ದಿನಾಂಕ: 04.01.2021.
6. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3579/98-99 ದಿನಾಂಕ: 19.01.2021.
7. ಸರ್ಕಾರಧ ಆದೇಶ ಸಂಖ್ಯೆ: ಆಇ 7(ಇ) ಸೇನಿಸೇ 2020, ದಿನಾಂಕ: 28.01.2021.

***

**ಪ್ರಸ್ತಾವನೆ:**

ರಾಜ್ಯ ಸರ್ಕಾರವು ಉಲ್ಲೇಖ-5 ರ ಆದೇಶದಲ್ಲಿ, ಕೋವಿಡ್-19 ರ ಹಿನ್ನೆಲೆಯಲ್ಲಿ ಸರ್ಕಾರವು ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಹಿನ್ನೆಲೆಯಲ್ಲಿ 2021 ನೇ ಸಾಲಿನ ಕ್ಯಾಲೆಂಡರ್ ವರ್ಷ ದಿನಾಂಕ: 01.01.2021 ರಿಂದ ದಿನಾಂಕ: 31.12.2021 ರವರೆಗಿನ ಅವಧಿಗೆ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಪಡೆಯುವ ಸೌಲಭ್ಯವನ್ನು ರದ್ದುಗೊಳಿಸಿ ಆದೇಶಿಸಿತ್ತು. ಸರ್ಕಾರದ ಸದರಿ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಂಡು ದಿನಾಂಕ: 19.01.2021 ರ ಆದೇಶದಲ್ಲಿ ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ರದ್ದುಗೊಳಿಸಲಾಗಿತ್ತು. ಸರ್ಕಾರದ ದಿನಾಂಕ: 28.01.2021 ರ ಆದೇಶದಲ್ಲಿ, ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ಪುನರುಜ್ಜೀವನಗೊಳಿಸಲು ದಿನಾಂಕ: 04.01.2021 ರ ಆದೇಶವನ್ನು ಹಿಂಪಡೆದು ಗಳಿಕೆ ರಜೆ ನಗದೀಕರಣ ಸೌಲಭ್ಯವನ್ನು ಮರುಸ್ಥಾಪಿಸಿ ಆದೇಶ ಹೊರಡಿಸಿರುತ್ತದೆ. ಇದಕ್ಕನುಗುಣವಾಗಿ, ಸರ್ಕಾರದ ದಿನಾಂಕ: 04.01.2021 ರ ಆದೇಶವನ್ನು ಅಳವಡಿಸಿಕೊಂಡಿರುವ ನಿಗಮದ ದಿನಾಂಕ: 19.01.2021 ರ ಆದೇಶವನ್ನು ಹಿಂಪಡೆದು, ಗಳಿಕೆ ರಜೆ ನಗದೀಕರಣದ ಸೌಲಭ್ಯದ ಯೋಜನೆಯನ್ನು ತಕ್ಷಣದಿಂದ ಜಾರಿಗೊಳಿಸಿ ಈ ಕೆಳಗಿನಂತೆ ಆದೇಶಿಸಿದೆ:-

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3579/98-99, ಬೆಂಗಳೂರು ದಿನಾಂಕ: 26 FEB 2021**

ಕವಿಪ್ರನಿನಿಯು ತನ್ನ ಅಧಿಕಾರಿ/ನೌಕರರಿಗೆ ಹಾಲಿ ಚಾಲ್ತಿಯಲ್ಲಿರುವಂತೆ, ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗದೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮರುಸ್ಥಾಪಿಸಿ ಆದೇಶಿಸಿದೆ.

"ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿದೆ."

ಪ್ರಧಾನ ವ್ಯವಸ್ಥಾಪಕರು
(ಸಿಬ್ಬಂದಿ)